# ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಾಟಕಗಳ ಅಭಿವೃದ್ಧಿ

**ಪವಿತ್ರ ಎ.ವಿ.**

**ಅತಿಥಿ ಉಪನ್ಯಾಸಕರು**

**ಶ್ರೀಮತಿ ಇಂದಿರಾಗಾಂಧಿ ಮಹಿಳಾ ಕಾಲೇಜು ಸಾಗರ**

ಯಾವುದಾದರೂ ಒಂದು ವಿಷಯವನ್ನು ಸುಂದರವಾಗಿ ಶಬ್ದಗಳಿಂದ ರಮಣೀಯವಾದ ರೀತಿಯಲ್ಲಿ ರಚಿಸಿದರೆ ಕಾವ್ಯವಾಗುತ್ತದೆ ಕಾವ್ಯದಲ್ಲಿ ಶ್ರವ್ಯಕಾವ್ಯ ದೃಶ್ಯಕಾವ್ಯ ಎಂದು ಎರಡು ವಿಧ. ಅಭಿನಯ ಯುಕ್ತವಾಗಿ ಎಲ್ಲರಿಗೂ ರಸಭಾವಾದಿಗಳನ್ನು ಚೈತನ್ಯಯುತವಾಗಿ ಅನುಭವಿಸುವಂತೆ ಮಾಡುವುದೇ ದೃಶ್ಯಕಾವ್ಯದ ಉದ್ದೇಶ. ಜೀವನವನ್ನೇರೂಪಿಸಿ ತೋರಿಸಿರುವುದರಿಂದ ಇದಕ್ಕೆ ರೂಪಕವೆಂದು ಹೆಸರಾಯಿತು. ರೂಪಕವು ಹತ್ತು ವಿಧವಾದರೂ ಅವುಗಳಲ್ಲಿ ನಾಟಕವು ಪ್ರಮುಖವಾದುದು. "ನಾಟ್ಯಂ ಭಿನ್ನ ರುಚೇರ್ಜನಸ್ಯ ಬಹುದಾಪ್ಯೇಕಂ ಸಮಾರಾಧನಂ ಎಂಬಂತೆ ನಾಟಕವು ಭಿನ್ನ ಪ್ರವೃತ್ತಿಯುಳ್ಳ ಜನರೆಲ್ಲರಿಗೂ ಅಮಿತಾನಂದವನ್ನುಂಟುಮಾಡುತ್ತದೆ. ಕಾವ್ಯೇಷು ನಾಟಕಂ ರಮ್ಯಂ ಎಂಬಂತೆ. ಕಾವ್ಯಗಳಲ್ಲಿ ನಾಟಕವು ಪ್ರಮುಖವಾದುದು. ಆದುದರಿಂದ ಸಾಹಿತ್ಯದಲ್ಲಿ ನಾಟಕಕ್ಕೆ ಹಿರಿಯ ಸ್ಥಾನವಿದೆ ಎಂದು ಹೇಳಬಹುದು.

ಕನ್ನಡ ಸಾಹಿತ್ಯದಲ್ಲಿ ಮೊದಮೊದಲು ನಾಟಕಗಳ ದುರ್ಭಿಕ್ಷವಾಗಿತ್ತು. ಕನ್ನಡದ ಮೊದಲ ನಾಟಕವೆಂದರೆ ಸಿಂಗಿರಾರ್ಯನ(1980) ಮಿತ್ರಮಿಂದಾ ಗೋವಿಂದ ಇದು ಹರ್ಷನ 'ರತ್ನಾವಳಿ' ನಾಟಕೆಯ ಅನುವಾದದಂತಿದೆ. ಅನಂತರ 1891ರಲ್ಲಿ ಬಸಪ್ಪಶಸ್ತ್ರಿಗಳು ಆಂಗ್ಲ ಸಾಹಿತ್ಯದ ಪ್ರಭಾವಕ್ಕೊಳಗಾಗಿ ಷೇಕ್ಸ್ ಪಿಯರ್ ಮಹಾಕವಿಯ ಒಥೆಲ್ಲೋ ನಾಟಕವನ್ನು 'ಶೂರಸೇವ' ಎಂಬ ಹೆಸರಿನಿಂದ ಕನ್ನಡಕ್ಕೆ ಭಾಷಾಂತರಿಸಿದರು ಮತ್ತು ಕಾಳಿದಾಸನ ಶಾಕುಂತಲಮ್ಮ ಉತ್ತಮ ರೀತಿಯಿಂದ ಕನ್ನಡಕ್ಕೆ ಅನುವಾದಿಸಿ ಅಭಿನವ ಕಾಳಿದಾಸನೆಂಬ ಬಿರುದನ್ನು ಹೊಂದಿದರು. ಭಾಸನ ಸ್ವಪ್ನವಾಸವದತ್ತ, ಪಂಚರಾತ್ರಗಳನ್ನು ಅಳಸಿಂಗಾಚಾರ್ಯರು ಉತ್ತಮವಾಗಿ ಅನುವಾದಿಸಿದದರು. ನಾಟಕ ಚಕ್ರವರ್ತಿಯೆನಿಸಿದ ಭಾಸನ ನಾಟಕಗಳೆಲ್ಲವೂ ಅನುವದಿತವಾದವು ನಾಗಾನಂದ ಮಧುಮಾಲತಿ, ವೇಣೀಸಂಹಾರ ವಿಕ್ರಮೋರ್ವಶೀಯಗಳು ಕನ್ನಡದಲ್ಲಿ ಅನುವಾದವಾಗಿ ಕನ್ನಡ ಸ್ವಂತಂತ್ರ ನಾಟಕ ರಚನೆಗೆ ಮೂಲಕಾರಣವಾಗಿ ನಾಟಕದ ಅಭಿವೃದ್ಧಿಗೂ ಸಹಾಯಕವಾದವು.

ನಾಟಕಗಳಲ್ಲಿ ಯಕ್ಷಗಾನ , ಕಂಪನಿ ನಾಟಕ, ಸಾಮಾಜಿಕ ನಾಟಕ, ಗೀತನಾಟಕ, ರೇಡಿಯೋ ಪ್ರಸಾರ ನಾಟಕಗಳೆಂಬ ವಿಧಗಳಿಂದ ಅಭಿವೃದ್ಧಿ ಹೊಂದಲಾರಂಭಿಸಿದವು. ನಾಟಕಗಳ ಅಭಿವೃದ್ಧಿಯು ಈ ಕಾಲದಲ್ಲಿ ಹುಲುಸಾಗಿ ಬೆಳೆದು ಗಾನಪದ್ಧತಿಯಿಂದ ಕೂಡಿ ಜನರಿಗೆ ಆನಂದವನ್ನಿತ್ತು, ಕನ್ನಡ ಸಾಹಿತ್ಯಕ್ಕೆ ಕಳೆಯನ್ನುಂಟುಮಾಡಿದವು.

ಯಕ್ಷಗಾನವು ಗಾನಪದ್ಧತಿಯ ಪುರಾಣನಾಟಕ; ಯಕ್ಷಗಾನವಾದುದರಿಂದ ಇದು ಯಕ್ಷಗಾನ ಅಥವಾ ಬಯಲಾಟವೆಂಬ ಹೆಸರನ್ನು ಪಡೆಯಿತು. ಈ ಬಯಲಾಟವು ವಿಶಿಷ್ಟವಾಗಿ ಬೆಳೆದುಬಂದ ಗಾನಪದ್ಧತಿ ದೇಸಿಛಂದದ ಗೀತೆಗಳ ಮುಖಾಂತರ ಕುಣಿತಕ್ಕೆ ಹಿನ್ನೆಲೆಯನ್ನೊದಗಿಸಿ ಯಕ್ಷಗಾನ ವೆನಿಸಿದೆ ಭಾವಪೂರ್ಣವಾದ ಹಾಡುಕುಣಿತಗಳೇ ಬಯಲಾಟದ ತಿರುಳಾಗಿವೆ. ಹೀಗೆ ಪುರಾಣ ಸಾಹಿತ್ಯ ಸಂಗೀತಗಳ ತ್ರಿವೇಣಿಯನ್ನು ಎಲ್ಲರ ಕಣ್ಣಿಗೂ ಹಬ್ಬ ವಾಗುವಂತೆ ಮಾಡಿದ ಯಕ್ಷಗಾನವು ಅದ್ಭುತ ಕಲಾಸೃಷ್ಟಿಯಾಗಿ ಸಾಹಿತ್ಯದ ಘನತೆಯನ್ನು ಹೆಚ್ಚಿಸಿತು. ಈ ಯಕ್ಷಗಾನವು ಕ್ರಿ.ಶ. 4,5ನೆಯ ಶತಮಾನಗಳಿಂದ ಪ್ರಾರಂಭವಾಯಿತೆಂದು ತಿಳಿಯಬಹುದು ಆದೆ 1500 ರಿಂದೀಚೆಗೆ ಯಕ್ಷಗಾನದ ಕೃತಿಗಳು ದೊರೆತೆವೆ, ಯಕ್ಷಗಾನವು ವೀರಸಸ ಪ್ರಧಾನವಾದ ಪೌರಾಣಿಕ ನಾಟಕ, ಇದರಲ್ಲಿ ಮೊದಲಿಗನೆನ್ನಬಹುದಾದ ವಾರಂಬಳ್ಳಿಯ ವಿಷ್ಣು ಎಂಬುವನು ಬಾಣಾಸುರನ ಕಾಳಗ , ಇಂದ್ರಕೀಲಕ , ವಿರಾಟಪರ್ವ ಮೊದಲಾದುವುಗಳನ್ನು ಬರೆದು ಯಕ್ಷಗಾನದ ಅಭಿವೃದ್ಧಿಗೆ ಮೂಲಕಾರಣನಾದನು ಅನಂತರ ಪಾರ್ತಿ ಸುಬ್ಬನು ಶಂಬರಾಸುರ ಕಾಳಗ, ರಾವಣೋದ್ಭವ, ಕೃಷ್ಣ ಸಂಧಾನ ಭೀಷ್ಮಪರ್ವ ಮುಂತಾದವುಗಳನ್ನು ಬರೆದನು ಇವನು ರಾಮಪಟ್ಟಾಭಿಷೇಕದಿಂದ ಹಿಡಿದು ಪಂಚವಟಿ ಸೇತು ಬಂಧನ, ರಾವಣವಧೆ ಇವೇ ಮೊದಲಾದ ಹಲವಾರು ರಾಮಾಯಣ ಪ್ರಸಂಗಗಳನ್ನು ರಚಿಸಿ, ಯಕ್ಷಗಾನ ವಾಲ್ಮೀಕಿ ಎನಿಸಿಕೊಂಡನು. ಅನಂತರ ದ್ರೌಪದಿಸ್ವಯಂವರ, ಸುಭದ್ರಾಕಲ್ಯಾಣ, ಧ್ರುವಚರಿತ್ರೆ, ಅತಿಕಾಯ ಕಾಳಗ, ಲವಕುಶರ ಕಾಳಗ ಮುಂತಾದವುಗಳನ್ನು ಹಟ್ಟಿಯಂಡಿಗೆ ರಾಮಭಟ್ಟರು ರಚಿಸಿ ಯಕ್ಷಗಾನ ಪ್ರಸಂಗವನ್ನು ಅನುವೃದ್ಧಿಪಡಿಸಿದರು ಈ ಬಯಲಾಟಗಳು ಕನ್ನಡಿಗರ ನೆಚ್ಚನ್ನು ಪಡೆದವು ನಮ್ಮ ಯಕ್ಷಗಾನಗಳಲ್ಲಿ ಸಾಮಾನ್ಯವಾಗಿ ಪೌರುಷದ ಪ್ರದರ್ಶನವಿದೆ.

ಅಲ್ಲಲ್ಲಿ ಹಾಸ್ಯಗಳಿದ್ದರೂ ವೀರ ತಾಂಡವಗಳೇ ಇಲ್ಲಿನ ವಿಶೇಷವಾಗಿ ಜನರ ಮೆಚ್ಚುಗೆಯನ್ನು ಪಡೆದು ಕನ್ನಡ ರಂಗ ಭೂಮಿಯ ಜನತೆಯನ್ನು ಹೆಚ್ಚಿಸಿದವು.

1843ರಲ್ಲಿ ಯಕ್ಷಗಾನದಿಂದ ಸ್ಪೂರ್ತವಾದ ಮಾರಾಠಿ ಸಂಗೀತ ನಾಟಕವು ಕಂಪನಿಗೆ ಕಾರಣವಾಗಿ , ಕರ್ನಾಟಕದಲ್ಲಿಯೂ ಕಂಪನಿಗಳು ಪ್ರಾರಂಭವಾದವು . ಈ ಕಂಪನಿ ನಾಟಕಗಳು ಸಂಗೀತ ಮತ್ತು ಸಾಹಿತ್ಯದ ಅಭಿರುಚಿಯನ್ನು ಜನರಲ್ಲಿ ಪ್ರಚೋದನೆಗೊಳಿಸಿದವು. ಅನೇಕ ಕಂಪನಿಗಳು ಪ್ರಾರಂಭವಾಗಿ ಬಹಳ ಹೆಚ್ಚಾಗಿ ಪೌರಾಣಿಕ ನಾಟಕಗಳನ್ನಾಡಿದವು . ಮೈಸೂರು ರಾಜಾರ ಹೆಚ್ಚಾಗಿ ಪೌರಾಣಿಕ ನಾಟಕಗಳನ್ನಾಡಿದವು. ಮೈಸೂರು ರಾಜಾರ ಕೃಪಾಪೋಷಿತವಾದ ಕಂಪನಿಗಳು ಹೆಚ್ಚಿದವು. ರಂಗಾಚಾರ್ಯರ ಕಂಪನಿಯು ಬಹಳ ನಾಟಕಗಳ ಪ್ರದರ್ಶನವಿತ್ತಿತು. ವರದಾಚಾರ್ಯರು 1904ರಲ್ಲಿ ರತ್ನಾವಳಿ ಥಿಯೆಟ್ರಿಕಲ್ ಕಂಪನಿ ಎಂದು ಹೆಸರಿಟ್ಟು ಕನ್ನಡರಂಗದ ದೊರೆಯಾಗಿ ಮೆರೆದರು , ಇವರು ಕನ್ನಡ ನಡಲ್ಲೆಲ್ಲಾ ಅನೇಕ ನಾಟಕಗಳನ್ನು ಪ್ರದರ್ಶಿಸಿ ಕೀರ್ತಿ ಪಡೆದು ನಾಟಕಶಿರೋಮಣಿ ಎಂಬ ಬಿರುದನ್ನು ಪಡೆದರು ಶಾಕುಂತಲ, ಹರಿಶ್ಚಂದ್ರ, ಪ್ರಹ್ಲಾದ ನಾಟಕಗಳನ್ನು ಅಭಿನಂದನೀಯವಾಗಿ ಅಡಿ ಅನಾಟಕದ ನಾಯಕರನ್ನು ಚಿರಸ್ಮರಣೀಯಗೊಳಿಸಿ ದೃಶ್ಯ ಕಾವ್ಯದ ಏಳ್ಗೆಗೆ ಮೂಲಕಾರನರಾದರು, ಅನಂತರ ಗುಬ್ಬಿ ವೀರಣ್ಣನ ಕಂಪನಿಯು ಅಭಿವೃದ್ಧಿಯನ್ನು ಹೊಂದಿತು. ಸಂಗೀತ ಮತ್ತು ಅಭಿನಯಗಳಿಂದ ಬೇಸತ್ತ ಜನರಿಗೆ ಹಿರಣ್ಣಯ್ಯನವರ ಮಿತ್ರ ಮಂಡಳಿ1942ರಲ್ಲಿ ಸ್ಥಾಪಿತವಾಗಿ ದೇವದಾಸಿ, ಮಕಮಲ್ ಟೋಪಿ ಇವೇ ಮೊದಲಾದ ಸಾಮಾಜಿಕ ನಾಟಕಗಳಿಂದ ನಗೆಯ ಔಷಧಿಯನ್ನಿತ್ತಿತ್ತು. ಕುಡಿತ, ವಿಷಮವಿವಾಹದಂಥ ಸಾಮಾಜಿಕ ಸಮಸ್ಸೆಗಳನ್ನು ಮಿಮರ್ಶಿಸಿ ಶ್ರೇಷ್ಠ ನಟರೆನಿಸಿಕೊಂಡು ಮಡಿದರು. ಅವರ ಮಗ ನರಸಿಂಹಮೂರ್ತಿ ಇಂದು ಪುನಃ ಮಂಡಳಿಯ ತೆರೆಯೆತ್ತಿ ರಾಜಧಾನಿಯಲ್ಲಿ ಲಂಚಾವತಾರ, ಭ್ರಷ್ಟಾಚಾರ ಅನಾಚಾರ ಮೊದಲದ ಸಾಮಾಜಿಕ ನಾಯಕಗಳನ್ನು ಅಭಿನಯಿಸುತ್ತಿದ್ದಾರೆ. ಹೀಗೆ ಈ ಕಂಪನಿಗಳು ಐತಿಹಾಸಿಕ ಪೌರಾಣಿಕ, ಸಾಮಾಜಿಕ ನಾಯಕಗಳಿಂದ ಸಾಹಿತ್ಯಕ್ಕೆ ನವ ಚೈತನ್ಯವನ್ನೊದಗಿಸಿದವು. ಚಲನಚಿತ್ರಗಳು ಇಪ್ಪತ್ತನೆಯ ಶತಮಾನದಲ್ಲಿ ಬಹಳ ಹೆಚ್ಚಿದ್ದರಿಂದ ಕಂಪನಿನಾಯಕಗಳು ದುಸ್ಥಿತಿಗೆ ಬಂದರೂ ಕಾವ್ಯನಾಟಕ, ಗೀತನಾಟಕ , ಸಾಮಾಜಿಕ ನಾಟಕಗಳು ಅಭಿವೃದ್ಧಿಯನ್ನು ಪಡೆದವು ಈ ಕಂಪನಿ ನಾಟಕಗಳು ನಾಟಕದ ಅಭಿವೃದ್ಧಿಗೆ ಕಾರಣವಾದವು.

ನಾಟಕ ನಟನ ಪ್ರದರ್ಶನಕ್ಕಾಗಿ ರಚಿತವಾದ ಒಂದು ಸಾಹಿತ್ಯ ಪ್ರಕಾರ. ನಾಟಕ ಪ್ರೇಕ್ಷಕನ ಬೌತಿಕ ಸಾಧ್ಯತೆಗಳನ್ನು ಅನಿಸರಿಸಿ ಒಂದು ನಿಗದಿತ ಸಮಯದಲ್ಲಿ ನೋಡಿ ಮುಗಿಸುವಂಥದ್ದು. ನಾಟಕದ ಸನ್ನಿವೇಶಗಳು ನಟರ ನಟನೆಯ ಸಾಧ್ಯತೆಯನ್ನುನುಸರಿಸಿ ರಚಿತವಾಗಿರುವುದು. ನಾಟಕದ ದೃಶ್ಯಗಳು ಆಯಾ ಕಾಲದ ರಂಗಭೂಮಿಯ ಸಾಧ್ಯತೆಗಳನ್ನನುಸರಿಸಿ ಸಿದ್ಧವಾಗಿರಬೇಕು. ಈ ಕಾರಣದಿಂದಲೇ ಪ್ರಾಚೀನ ಗ್ರೀಕ್ ನಾಟಕಕಾರರು ಕಾಲೈಕ್ಯ, ಕ್ರಿಯೈಕ್ಯ, ಸ್ಥಳೈಕ್ಯ ಎಂಬ ಮೂರು ಅಂಶಗಳನ್ನು ಮುಖ್ಯವಾಇರಿಸಿಕೊಂಡಿದ್ದರು. ನಾಟಕ ಒಂಖದು ಸಂಕೀರ್ಣ ಕಲೆ, ಅಂಗಿಕ ಅಭಿನಯ, ಪಾತ್ರಪೋಷಣೆ , ಸಂವಿಧಾನ, ರಂಗಪರಿಕರ, ಸಂಗೀತ, ಮೇಳ ಮುಂತಾದವುಗಳನ್ನು ಸರಿಯಾಗಿ ದುಡಿಸಿಕೊಳ್ಳುವ ಅಗತ್ಯವಿದೆ. ಎಲ್ಲಕ್ಕಿಂತ ಮುಖ್ಯವಾಗಿ ಪ್ರೇಕ್ಷಕ ವರ್ಗದ ಅಭಿರುಚಿಗೆ ಅನುಗುಣವಾಗಿ ನಾಟಕದ ವಸ್ತು, ತಂತ್ರ, ಕಾಲಕಾಲಕ್ಕೆ ಬದಲಾಗಬೇಕಾಗುತ್ತದೆ. ಸಾಮಾಜಿಕ ವಸ್ತುವಿಷಯಗಳಾದ ಕೌಟುಂಬಿಕ ಕಲಹ, ಪ್ರೇಮ, ಮತ್ಸರ, ಸುಖಾಂತಗಳಿಂದ ಕೂಡಿದ ನಾಟಕ ಕಲೆ ನಂತರ ಓದುವ ವರ್ಗವನ್ನು ಗಮನದಲ್ಲಿಟ್ಟುಕೊಂಡು ಅನುಭವ ವಲಯದಿಂದ ಹೊಸತನವನ್ನು ಕಂಡು ಕೊಂಡಿದ್ದರಿಂದ ಪೌರಾಣಿಕ, ವೃತ್ತಿ, ಹವ್ಯಾಸಿ ರಂಗಭೂಮಿಗಳು ಅಭಿವೃದ್ಧಿ ಹೊಂದಿ ಇಂದಿನ ತುರ್ತು ಕಾಲಾವಧಿಯಲ್ಲಿ, ಬಾನುಲಿ, ಬೀದಿ ನಾಟಕಗಳವರೆಗೆ ಹಂತಹಂತವಾಗಿ ಬೆಳೆದಿದೆ. ಈ ನಡುವೆ ನವ್ಯ ಸಾಹಿತ್ಯದ ಚಳುವಳಿಯ ಪ್ರೇರಣೆಯಿಂದ ಅನಾಥಪ್ರಜ್ಞೆಯನ್ನೆ ಜೀವಾಳವಾಗಿ ಉಳ್ಳ ಅಸಂಗತ ನಾಟಕಗಳೂ ಬಂದು ಹೋದವು. ಗ್ರೀಕ್ ರುದ್ರನಾಟಕಗಳಿಂದಿಡಿದು ಇಂದಿನವರಗೂ ಆಧುನಿಕ ಇತರ ಸಮೂಹ ಮಾಧ್ಯಮಗಳು ಇದ್ದಾಗ್ಯೂ ನಾಟಕ ಜೀವಂತವಾದ ಕಲೆಯಾಗಿದೆ. ಸಾಮಾಜಿಕ ನಾಯಕಗಳಲ್ಲಿ ವಾಸ್ತವತೆಯು ಪ್ರಜ್ಞೆಯುದಿಸಿದ್ದು ಇಂಗ್ಲೆಂಡಿಗೆ ಹೋಗಿಬಂದ ಕೈಲಾಸು ಹಾಗೂ ಶ್ರೀರಂಗದಿಂದ ಎನ್ನಬಹುದು ಇವರು ಪ್ರತಿಭಾವಂತರಾಗಿ ಕನ್ನಡ ನಾಟ್ಯಕ್ಕೆ ನವೀನ ನಡೆಯನ್ನೇ ಕಲಿಸಿದರು. ಸಾಮಾಜದಲ್ಲಿರುವ ಲೋಪದೋಷಗಳನ್ನು ಅಡುನುಡಿಗಳಲ್ಲಿಯೇ ವಿಡಂಬಿಸಿ ತೋರಿದರು. ಪ್ರಹಸನ ಪಿತಾಮಹಾ ಕೈಲಾಸರಂತೆ ಇಂಗ್ಲಿಷ್ ಕನ್ನಡದಲ್ಲಿ ನಾಟಕ ಬರೆಯುವವರು ಬರಲಿಲ್ಲವಾಗಿ ಕನ್ನಡಕ್ಕೊಬ್ಬನೇ ಕೈಲಾಸಂ ಎನ್ನವಂತಾಯಿತು. ಶ್ರೀರಂಗರು ಭಾವಯುಕ್ತವಾದ ನಟಕಗಳನ್ನು ರಚಿಸಿ ನಾಟಕ ಸಾಹಿತ್ಯಕ್ಕೆ ಅಪಾರ ಸೇವೆ ಮಾಡಿದರು ಕೈಲಾಸಂರವರು ರಂಗನಾಟಕಗಳನ್ನು ಬದಲಾಯಿಸಿ ಹೊಸ ನಾಟಕಗಳ ಪ್ರತಿಷ್ಠಾಪನೆ ಮಾಡಿದರು. ನಮ್ಮ ಕಂಪನಿಯಲ್ಲಿ ನಾಟಕದ ಸಂಗೀತಾಭಿನಯಗಳ ಅತಿರೇಕವನ್ನೂ 'ನಂಬ್ರಾಹ್ಮಣ್ಕೆ'ಯಲ್ಲಿ ದಕ್ಷಿಣಿ ಆಸೆಯ ಹಾರವರನ್ನೂ ವಿಡಂಬನೆಮಾಡಿರುವರು 'ಟುಳ್ಳು ಗಟ್ಟಿ' ತಾಳೀಕಟ್ಟೋಕ್ಕೊಲಿನೆ, ಎಂಬುವುಗಳನ್ನು ಬರೆದು ಸಮಾಜದ ರೀತಿ ನೀತಿಗಳನ್ನು ಟೀಕಿಸಿದರು ಬಂಡ್ವಾಳ್ವಿಲ್ಲದ ಬಡಾಯಿ ಯ ಲಾಯರು ಕಕ್ಷಿಗಾರನಿಂದ ಪುಕ್ಕಟೆ ಕೆಲಸಮಾಡಿಕೊಳ್ಳುವಾಗ ಮನೆ ಸೀರೆ ಮಾಯವಾಗುವುದು 'ಹೋಂರೂಲ್' ನಕಲ್ಲಿ ರಾಮಣ್ಣನಂಥ ಮೈದಾನದ ಹೆಬ್ಬುಲಿ ಮನೆಯ ಮೂಗಿಲಿಯಾದನು ಅಮ್ಮಾವ್ರ ಗಂಡ ಗಂಡಸ್ಕತ್ರಿ ಗಳಲ್ಲಿ ಗಂಡ ಸತ್ತಾಗ ಸೀಕರಣಿ ಹೊಡೆದು ಕೂಡುವ ಸಾವಿತ್ರಿಯದೊಂದು ಮೋಜಾದರೆ. ಸುಬ್ಬಣ್ಣ ವೈದ್ಯನಾಗಿ ರಂಗಣ್ಣನ ಕುಟುಂಬಕ್ಕೆ ಮದ್ದು ಹುಡುಕಿ ತನ್ನ ವ್ಯಧಿ ಪ್ರಬಲವಾಯಿತೆಂಬ ಗುಟ್ಟು ರಟ್ಟಾಗಿ ಹೆಂಡತಿಯ ಕೈಲಿ

ಸಿಕ್ಕಿ ಮೆತ್ತಗಾಗುವುದು ಇನ್ನೊಂದು ಮೋಜು ಇವರ ಬಹಿಷ್ಕಾರ, ಸೂಳೆ ಎಂಬ ನಾಟಕಗಳು ಗಂಭೀರ ವಿಚಾರ ದುರಂತಗಳಾಗಿವೆ. ಕೈಲಾಸಂರವರು ಇಂಥ ನಾಟಕಗಳಿಂದ ಜನರಲ್ಲಿ ಮತ್ತು ಸಾಹಿತ್ಯದಲ್ಲಿ ನವಚೈತನ್ಯವನುಂಟುಮಾಡಿ ನಾಟಕ ಪಿತಾಮಹ ಎಂಬ ಪ್ರಸಿದ್ಧಿಯನ್ನು ಪಡೆದರು. ಕೈಲಾಸಂರವರಂತೆ ಉತ್ತರ ಕರ್ನಾಟಕದಲ್ಲಿ ಶ್ರೀರಂಗರು ಬಹಳ ಸೇವೆಸಲಿಸ್ಲಿ ಸಾಹಿತ್ಯಾಭಿವೃದ್ಧಿಗೆ ನೆರವಾದರು ಇವರು 'ಹರಿಜನೋದ್ಧಾರ' 'ಪ್ರಪಂಚ ಪಾಣಿಪತ್ತು', 'ಸಂಸಾರಿಗಕಂಸ' 'ಮುಕ್ಕಣ್ಣ'. 'ವಿರಾಟಪುರುಷ,' 'ಕಪಟ ನಾಟಕ', 'ಶೋಕಚಕ್ರ' ಅಹಲ್ಯೋದ್ಧಾರ ಮೊದಲಾದ ಹೊಸ ನಾಟಕಗಳನ್ನು ರಚಿಸಿ ಪ್ರಿಸಿದ್ಧರಾದರು.

ಇವರು ಹಾಗೆ ಉತ್ತಮ ನಾಟಕಗಳನ್ನು ಸೃಜಿಸಿದವರು ಬೇಂದ್ರೆಯವರು ಇವರ ಹೊಸ ಸಂಸಾರ ತಪ್ಪು ತಿಳಿವಳಿಕೆ ಸಂಶಯಗಳಿಂದ ಹದಗೆಟ್ಟ ಬಾಳನ್ನು ಅಂತಃಕರಣದ ಕೌಶಲದಿಂದ ಹೊಂದಾಣಿಕೆಗೆ ತರುವುದಾಗಿದೆ. ಹುಚ್ಚಾಟದಲ್ಲಿ ಬಂದ ತಿರುಕರ ಇಡುಗು ಏಕಪಾತ್ರಾಭಿನಯದಂತೆ ಶ್ರೀಮಂತನೆದುರು ಸರಿಯುವ ಭಿಕ್ಷುಕರ ವೈವಿಧ್ಯ ತೋರಿದೆ. 'ಸಾಯೋ ಆಟ ದೆವ್ವದ ಆಟ ಮನೆ 'ಯಲ್ಲಿ ತಾಯಿ ಹೆಂಡತಿ ಕಾದಾಡಿದಾಗ ಇದ್ದ ಮನೆಬಿಟ್ಟು ತಾಯಿಯನ್ನು ಯಾತ್ರೆಗಟ್ಟಿದ ವಿಷಯವು ವ್ಯಕ್ತವಾಗುತ್ತದೆ. 'ಗೋಲ್' ಎಂಬ ಏಕಾಂತವು ಕಾಲೇಜು ವಿದ್ಯಾರ್ಥಿಗಳ ಆದರ್ಶಕಥನವನ್ನು ನಿತೋಪಿಸಿದೆ. ಒಟ್ಟಿನಲ್ಲಿ ಬೇಂದ್ರೆಯವರ ನಟಕಗಳು ಗಾತ್ರದಲ್ಲಿಲ್ಲದಿದ್ದರೂ ಗುಣದಲ್ಲಿ ಹಿರಿಯವು. ಸಾಮಾಜಿಕ ನಾಟಕ ಯುಗದಲ್ಲಿ ಪೌರಾಣಿಕವಸ್ತುವನ್ನು ನವ್ಯ ರೀತಿಯಿಂದ ಒದಗಿಸಿದವರು ಶ್ರೀಯವರು . ಅವರು ರನ್ನನ್ನ ಗದಾಯುದ್ಧವನು ನಾಟಕಕ್ಕೆ ತಿರುಗಿಸಿದರು. ಅವರು ಸರಳ ರಗಲೆಯನ್ನೆ ನಾಟ್ಯ ಛಂದವಾಗಿಸಿಕೊಂಡು ಗ್ರೀಕ್ ಪ್ರಭಾವ ದಿಂದ ಅಶ್ವತ್ಥಾಮನ್, ಪಾರಸೀಕರು ಎಂಬ ದುರಂತ ನಾಟಕಗಳನ್ನು ಸೃಜಿಸಿ ದೃಶ್ಯಕಾವ್ಯಕ್ಕೆ ಒಂದು ಹೊಸ ಕಳೆಯನ್ನು ತಂದು ಕೊಟ್ಟರು. ಅಂತಿಗೊನೆಯನ್ನು ಕೆ.ವಿ ರಾಘವಾಚಾರವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ನಾಟ್ಯ ಛಂದದಲ್ಲಿ ಸುಂದರವಾದ ಸಾಹಿತ್ಯವನ್ನು ಸೃಷ್ಟಿಸಿದ ಮಹಾನಭಾವರು ಕುವೆಂಪುರವರು. ಇವರು ಪದ್ಯ, ಗದ್ಯ, ವಿಮರ್ಶೆಕಾದಂಬರಿ ಕವನಗಳು, ನಾಟಕಗಳು, ಇವೇ ಮೊದಲಾದ ಸಾಹಿತ್ಯದ ಎಲ್ಲಾ ಭಾಗದಲ್ಲಿಯೂ ಉತ್ತಮ ಕೃತಿಗಳನ್ನು ರಚಿಸಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ಅಪರ ಕಾಣಿಕೆ ಸಲ್ಲಿಸಿ ಧನ್ಯರಾಗಿದ್ದಾರೆ. ಇವರ ಪ್ರತಿಮಾ ವಿದಾನದ ಕೃತಿಗಳ ಬೃಹತ್ತು ಮಹತ್ತು ಕೇವಲಮನೋರಂಗಕ್ಕೆ ವೇದ್ಯವಾದವುಗಳು. ಇವರ ನಾಟಕಗಳಂತೂ ಭಾವನಾಮಯವಾದವುಗಳಯ ಇವರ 'ಯಮನಸೋಲಿ'ನಲ್ಲಿ ಪ್ರೆಮವು ಧರ್ಮವನ್ನು ಗೆದ್ದುದೂ, ಮಹಾರಾತ್ರಿಯಲ್ಲಿ ಸಿದ್ಧಾರ್ಥನು ಸಿದಿಯ ಅರ್ಥವನ್ನು ಪಡೆದು ಬುದ್ಧನಾಗಲು ಮನೆಯನ್ನು ಬಿಟ್ಟದ್ದು ರಮ್ಯವಾಗಿ ನಿರೂಪಿತವಾಗಿವೆ. ಪ್ರಾಚೀನ ಕಾವ್ಯಗಳ ಸೀತಾಪರಿತ್ಯಾಗವು ಇವರ ನಾಟಕದಲ್ಲಿ 'ವಾಲ್ಮೀಕಿಯ ಭಾಗ್ಯ'ವಾಗಿದೆ. ಶೂದ್ರ ತಪಸ್ವಿಯಲ್ಲಿ ಶಂಬೂಕನು ಶೂದ್ರನಾದರೂ ಉತ್ತಮ ತಪಸ್ವಿ ಎಂಬ ದರ್ಶನವು ವ್ಯಕ್ತವಾಗಿದೆ. 'ಬೆರಳ್ಗೆ ಕೊರಳ್ ದಲ್ಲಿ'ಏಕಲವ್ಯನ ಹೆಬ್ಬೆರಳು ಗುರುದಕ್ಷಿಣೆಯಾದಾಗ ಅವನ ತಾಯಿಯ ಆರ್ಗ್ಗೊ ಬಲಿ ನನ್ನ ಕಂದನ ಬೆರಳ್ ಬಲಿಯಕ್ಕೆ ಆ ಪಾಪಿಯ ಕೊರಳ್ ಎಂಬ ಶಾಪದ ಮಹತ್ವದಿಂದ ರಣದಲ್ಲಿ ದ್ರೋಣನ ಬಲಿಯಾದುದನ್ನು ಪ್ರತಿಧ್ವನಿಸುತ್ತದೆ. ಇನ್ನು ಶ್ಮಶಾನ ಕುರುಕ್ಷೇತ್ರದ ದಿವ್ಯ ಭವ್ಯವು ಆದ ಕಲ್ಪನೆ ಸುಂದರ ಕಾವ್ಯವನ್ನು ಕೊಟ್ಟಿದೆ. ಈ ನಾಟಕವು ಕೌರವನ ಛಲ, ಧೀರ ಗಾಂಭೀರ್ಯ ಮತ್ತು ಆದಟಿನ ಮಹಾವೈಶಾಲ್ಯತೆಯನ್ನು ಪ್ರತಿಬಿಂಬಿಸಿ ಕನ್ನಡ ಸಾಹಿತ್ಯದ ರಸಗನ್ನಡಿಯಾಗಿದೆ. ಚಂದ್ರ ಹಾಸ'ವೂ ಈ ಪುರಾಣ ಕೃತಿಗಳ ಮಾಲೆಯದೇ ಆಗಿದೆ. ಜಲಗಾರ ಅಸ್ಪೃಶ್ಯನಾದರೂ ದೇವರನ್ನು ಕಂಡು ಆನಂದಿಸಿದ ದೇಶ್ಯ ತೋರುತ್ತದೆ. ಇದರಲ್ಲಿ ಭಗಂತನದರ್ಶನಕ್ಕೆ ನಿಶ್ಚಲಭಕ್ತಿಯೊಂದೇ ಕಾರಣವೆಂಬ ದರ್ಶನ ಪ್ರತಿಬಿಂಬಿತವಾಗಿದೆ. ಇವರ ರಕ್ತಾಕ್ಷಿ' ಬಿದನೂರಿನ ಇತಿಹಾಸದರ್ಪಣವಾದರೆ 'ಬಿರುಗಾಳಿ' ಟಿಂಪೆಸ್ಟನ್ನು ಅನುವಾಸಿದಿದ ಉತ್ತಮ ನಾಟಕವಾಗಿದೆ.

ಈ ಆಧುನಿಕ ಯುಗದಲ್ಲಿ ಅನೇಕರು ಉತ್ತಮವಾದ ನಾಟಕಗಳನ್ನು ರಚಿಸಿ ಕನ್ನಡ ಸಾಹಿತ್ಯದ ಏಳ್ಗೆಗೆ ಮುಖ್ಯ ಕಾರಣರಾಗಿದ್ದರೆ. ಯಕ್ಷಗಾನ ಪ್ರಸಂಗದಲ್ಲಿ ಉತ್ತಮ ಕೃತಿಯಿಂದ ಗಣ್ಯತೆ ಪಡೆದ ಕಾರಂತರು 'ಗರ್ಭಗುಡಿ' ಲವಕುಶರು, ಸಾವಿತ್ರಿ ಮೊದಲಾದವುಗಳನ್ನು ಬರಿದಿದ್ದಾರೆ ಪು.ತಿ ನರಸಿಂಹಾಚಾರ್ಯರು ಅಹಲ್ಯೆ ಶಬರಿ ಹರಿಣಾಭಿಸರನ, ಗೋಕುಲನಿರ್ಗಮನೆ ಎಂಬ ಗೀತನಾಟಕಗಳನ್ನು ಬರೆದಿದ್ದಾರೆ. ಶ್ರೀನಿವಾಸರು ಯಶೋಧರೆ ಸಾವಿತ್ರಿ, ತಿರುಪಣೆ ಇವುಗಳನ್ನು ಬರದು ಪ್ರಸಿದ್ಧರಾಗಿದ್ದಾರೆ. ವಿ.ಸೀತಾರಾಮಯ್ಯನವರು , ಡಿ.ವಿ.ಜಿ ರಂ.ಶ್ರೀ ಮುಗಳಿ, ಸಂಸ, ಕಸ್ತೂರಿ ಮೊದಲಾದವರು ಅನೇಕ ನಟಕಗಳನ್ನು ರಚಿಸಿ ಕನ್ನಡ ಸಾಹಿತ್ಯದ ಅಭಿವೃದ್ಧಿಗೆ ಮುಖ್ಯ ಕಾರಣರಾಗಿದ್ದಾರೆ. ಎಂ.ಆರ್. ಶ್ರೀ ನಿವಾಸಮೂರ್ತಿಗಲ ನಾಗರಿಕವು ಧರ್ಮವನ್ನು ಹೊಸ ದೃಷ್ಟಿಯಿಂದ ವೀಕ್ಷಿಸುವುದಾದರೆಎ, ಧರ್ಮದುರಂತವು ಮತಂತರದ ಅವಾಂತರವನ್ನು ನಿತೂಪಿಸುವುದಾಗಿದ. ಇವರು ಸೈರಂಧ್ರಿ, ರತಿವಿಲಾಪ, ತಪಸ್ವಿನಿ ಮೊದಲಾದ ನಾಟಕಗಳಿಂದ ಪ್ರಸಿದ್ಧರಾಗಿ ನಾಟ್ಯಸಾಹಿತ್ಯಕ್ಕೆ ಉತ್ತಮ ಕಾಣಿಕೆ ಸಲ್ಲಿಸಿದ್ದಾರೆ.

ನಾಟಕದಂತೆ ಚಲನಚಿತ್ರಗಳೂ ಕೂಡ ಕನ್ನಡ ಸಾಹಿತ್ಯದ ಅಭಿವೃದ್ಧಿ ಪ್ರೇರಕವಾಗಿವೆ. ಈ ಮೂಲಕವೂ ಅನೇಕ ನಟಕೀಯ ಸನ್ನಿವೇಶಗಳು ಪ್ರಚಾರವಾಗುತ್ತಿವೆ. ರೇಡಿಯೋ ಬಂದಾಗಿನಿಂದ ಬೆಳೆಯುತ್ತಿರುವ ಪ್ರಸಾರ ರೂಪಕ ವಿಶಿಷ್ಟ ತಂತ್ರದಿಂದ ಕೂಡಿದೆ. ಇ ಪ್ರಸಾರ ನಾಟಕಗಳು ಸಾಹಿತ್ಯಾಭಿವೃದ್ಧಿಯ ಸಂಕೇತವಾಗಿವೆ. ಈ ಕಾಲದಲ್ಲಿ ನಾಟಕ ಗದ್ಯ

ಸಾಹಿತ್ಯದ ಈ ಅನೇಕ ಬಗೆಗಳು ಭರದಿಂದ ಅಭಿವೃದ್ಧಿ ಸಾಹಿತ್ಯದೇವಿಯ ಕೈಗನ್ನಡಿಯಾಗಿವೆ, ಹೀಗೆ ಈ ನಾಟಕ ಕಲೆಯು ಯಕ್ಷಗಾನ , ಪೌರಾಣಿಕ , ಕಂಪನಿ ನಾಟಕಗಳು, ಪಾಶ್ಚಾತ್ಯರೀತಿಯ ನಾಟಕಗಳು, ರೇಡಿಯೋ ನಾಟಕಗಳು ಎಂಬ ಅನೇಕ ವಿಧವಾಗಿ ಬೆಳೆದು ಕನ್ನಡ ಸಾಹಿತ್ಯಕ್ಕೆ ಜೀವಕಳೆಯನ್ನು ತಂದಿವೆ.

ಪರಾಮರ್ಶನ ಗ್ರಂಥಗಳು.

1.ಕನ್ನಡ ಸಾಹಿತ್ಯ ಚರಿತ್ರೆಯ ಸಂಕ್ಷಿಪ್ತ ಪರಿಚಯ

2. ಕನ್ನಡ ಸಾಹಿತ್ಯ ಕೋಶ–ಸಂಪಾದಕರು ರಾಜಪ್ಪ ದಳವಾಯಿ

3.ಕರ್ನಾಟಕ ಸಂಗಾತಿ– ಕನ್ನಡ ಅಭಿವೃದ್ಧಿ ಪ್ರಾಧಿಕಾರ್, ಬೆಂಗಳೂರು.

4.ಖಂಡೋಬಾ ಪಿ.ಕೆ–ಜಾನಪದ ಮುನ್ನೋಟ.

5.ಜಾನಪದ ಸ್ವರೂಪ–ಹಾ.ಮಾ ನಾಯಕ

6. ಕರ್ನಾಟಕ ಜಾನಪದ ಕಲೆಗಳು–ಗೊ.ರು.ಚೆನ್ನಬಸಪ್ಪ.

7 . ಕರ್ನಾಟಕ ಕ್ನನಡ ವಿಷಯ ವಿಶ್ವಕೋಶ– ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾನಿಲಯ.